**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ವಾದಿ ಪರವಾಗಿ ಶ್ರೀ ಬಿ.ಎಸ್. ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು, ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ಈ ದಾವೆಗೆ ಪೂರಕವಾಗಿ ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳಲ್ಲಿರುವ ದಿನಾಂಕಃ 08-04-2021 ರ ಕ್ರಯದ ಕರಾರು ಪತ್ರವನ್ನು ನಿಪಿ 1 ಎಂದು ಮತ್ತು ಅದರಲ್ಲಿರುವ ನನ್ನ ಸಹಿಗಳನ್ನು ನಿಪಿ-1(ಎ) ಮತ್ತು ನಿಪಿ-1(ಬಿ) ಎಂದು, 1ನೇ ಪ್ರತಿವಾದ ಸಹಿಯನ್ನು ನಿಪಿ 1(ಸಿ) ಎಂದು ಮತ್ತು ನಿಪಿ 1(ಡಿ) ಎಂದು, ರೇಣುಕಾ ರವರ ಸಹಿಯನ್ನು ನಿಪಿ 1(ಇ) ಎಂದು ಮತ್ತು ಭೀಮರಾವ ರವರ ಸಹಿಯನ್ನು ನಿಪಿ 1(ಎಫ) ಎಂದು, ದಿನಾಂಕ 19-04-2024 ರ ಕಾನೂನು ಬದ್ದ ನೋಟಿಸನ್ನು ನಿಪಿ 2 ಎಂದು, ದಿನಾಂಕಃ 02-03-2023 ರ ಮಾರಾಟ ಪತ್ರದ ದೃಡೀಕೃತ ನಕಲನ್ನು ನಿಪಿ 3 ಎಂದು, ಮುಟೇಷನ ರೆಜಿಸ್ಟರ ಪ್ರತಿಗಳನ್ನು ನಿಪಿ 4 ರಿಂದ 6 ಎಂದು, ಸರ್ವೆ ನಂ. 87/*/1 ರ 2 ಪುಟಗಳಲ್ಲಿರುವ ಪಹಣಿ ಪತ್ರಿಕೆಯನ್ನು ನಿಪಿ 7 ಎಂದು ಗುರುತಿಸಲಾಯಿತು.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಗಣಿಸಿ ಸದರಿ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲು 1ನೇ ಪ್ರತಿವಾದಿ ಹಾಜರಿದು ಮತ್ತು 1ನೇ ಪ್ರತಿವಾದಿ ಪಾಟೀಸವಾಲಿಗೆ ತಯಾರಿಲ್ಲದಿರುವ ಕಾರಣ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**